ಕಂಡವು. ಆದರೆ ಮೊಲದ ಮರಿಯನ್ನು ಬೇಟೆಯಾಡುವ ಹುಲಿ ಮುಖಗಳಂತೆ ಕಾಣಿಸಲಿಲ್ಲ... ಅವರು ಹುಲಿಗಳಾ... ತಿಮಿಂಗಲಗಳು... ಆಗಿರಲಿಕ್ಕಿಲ್ಲ. ಹಾಗೆ ನೋಡಿದರೆ ಮೊಲದ ಮರಿಗಳನ್ನು ಹುಲಿಗಳು ಬೇಟೆಯಾಡಲಾರವೇನೋ.

ಬೇಟೆಯಾಡುವ ಮುಖಗಳು, ಬೇಟೆಯಾಡದ ಮುಖಗಳು ಒಂದೇ ತೆರನಿರುತ್ತವೆಯೇ... ಏನೋ!

ಗುಟುರು ಹಾಕುವ ಗೂಳಿಗಳನ್ನು ತಡೆಯಬಲ್ಲೆನೆಂದು, ಬುಲ್‌ಫೈಟರ್ ಎಂದು ಎದೆಯುಬ್ಬಿಸಿ ಕೊಚ್ಚಿಕೊಳ್ಳುತ್ತಿದ್ದ ಚೈತನ್ಯನ ತಲೆಗೆ ಎರಡು ಬಿಗಿದು ಕಂಬಕ್ಕೆ ಕಟ್ಟಿಹಾಕಿದರು. ಚೀರುತ್ತಿರುವ ನನ್ನ ಗಂಟಲಿಗೆ ನೂರಾರು ಮುಳ್ಳು ಅಡ್ಡಬಿದ್ದಂತೆ ಮಾತು ಹೊರಡುತ್ತಿಲ್ಲ. ಆ ಮಟಮಟ ಮಧ್ಯಾಹ್ನ ಇದ್ದಕ್ಕಿದ್ದಂತೆ ದಟ್ಟವಾದ ಮೋಡಗಳು ಕವಿದುಕೊಂಡಂತೆ ನನ್ನ ಕಣ್ಣಲ್ಲಿ ಕತ್ತಲೆ. ಕಣ್ಣು ತೆರೆಯಲಿಲ್ಲ. ಒಬ್ಬ, ಇಬ್ಬರು, ಮೂವರು, ನಾಲ್ವರು... ನಂತರ ನಿಜಕ್ಕೆ ಒಬ್ಬೊಬ್ಬರು ಎಷ್ಟು ಬಾರಿ ಎಂಬುದು ಲೆಕ್ಕವಿಡಲಿಕ್ಕೂ ಸಾಧ್ಯವಿಲ್ಲದ ಪೈಶಾಚಿಕತ್ವ. ಕೆಳಗಡೆ ಫ್ಲೋರಿಂಗ್ ಮಾಡದ ಬರಸು ನೆಲ ಬೆನ್ನಿಗೆ ಸಾವಿರಾರು ಡಬ್ಬಣಗಳಂತೆ ಚುಚ್ಚುತ್ತಿದೆ. ಸ್ವಲ್ಪ ಹೊತ್ತಿಗೆ ಸಾವಿರಾರು ಫೋರ್ಕ್‌ಗಳು ಆ ಮೃದುವಾದ ಶರೀರ ಭಾಗವನ್ನು ಹೊಕ್ಕು ಮತ್ತೆ ಹೊರಬಂದು ಮತ್ತೆ ಒಳಗಿಳಿಯುತ್ತಿದ್ದಂತೆ ಭಯಂಕರವಾದ ನೋವು. ತೇವತೇವ... ಅಸಹ್ಯವೋ ಜಿಗುಪ್ಸೆಯೋ... ಸಾವಿರಾರು ಬಾಯಿಗಳು ಒಮ್ಮೆಗೇ ವಾಂತಿ ಮಾಡಿಕೊಂಡ ವಾಸನೆ. ಸ್ವಚ್ಛವಾದ ನೆಲವೆಲ್ಲವೂ ಕೊಳಕಾದಂತೆ. ಹಚ್ಚಹಸಿರ ಹೊಲಕ್ಕೆ ತೆಗಲು ಹತ್ತಿದಂತೆ. ಮನಸ್ಸಿಗೆಲ್ಲಾ ತೆಗಲು.

ಗುಟರು ಹಾಕುತ್ತಾ ಏರಿ ಬರುವ ಗೂಳಿಯನ್ನು ತಡೆಯಬಲ್ಲ ಸಿಕ್ಸ್ ಪ್ಯಾಕ್ ಸಲ್ಮಾನ್ ಖಾನೋ, ಅಮೀರ್ ಖಾನೋ ನನ್ನ ಚೈತನ್ಯ ಯಾತಕ್ಕೂ ಉಪಯೋಗಕ್ಕೆ ಬರಲಿಲ್ಲ ಆ ದಾಂಡಿಗರ ಮುಂದೆ. ನನ್ನ ಗೆಳೆಯ ಧೀರನೇ ಎಂದುಕೊಂಡಿದ್ದೆ. ಧೀರನೇ. ಆದರೆ ಗಂಡುಗಲಿ ಅಲ್ಲ ಅಂತ ಕಾಣುತ್ತೆ. ಅಷ್ಟಕ್ಕೂ ಅನೇಕ ಗೂಳಿಗಳು... ಹಾವಿನಂತಹ ಮುಖವುಳ್ಳ ಈ ಜೀವಿಗಳನ್ನು ಎದುರಿಸಲು ಈ ಒಬ್ಬ ಗಂಡುಗಲಿಯಿಂದ ಸಾಧ್ಯವಾದೀತೆ?

ಚೈತನ್ಯನ ವಿಷಯ ಬಿಡಿ. ಚಿಕ್ಕಂದಿನಿಂದ ತನ್ನ ಬಗ್ಗೆ ಇದ್ದ ಅಭಿಪ್ರಾಯವಾದರೂ ಏನು... ಭಾಪ್ರೆ... ತನ್ನ ತಂಟೆಗೆ ಬರುತ್ತಿದ್ದುದಾದರೂ ಯಾರು? ಕಣ್ಣಲ್ಲಿ ಕತ್ತಿ ಇಟ್ಟುಕೊಂಡು ಓಡಾಡುತ್ತಿದ್ದಳು. ಮನುಷ್ಯ ಹೋಗಲಿ, ಕ್ರೂರ ಮೃಗವೂ ಸಹ ತನ್ನ ಬಳಿ ಸುಳಿಯಲಾರದು ಎನ್ನುತ್ತಿದ್ದರು. ಏನಾದವು ಆ ಕತ್ತಿಯಂಚಿನ ನೋಟಗಳು.

ಜೀವ ಸಹಿತ ಬಿಟ್ಟಿದ್ದಕ್ಕೆ ಅಮ್ಮ ಸಂತೋಷಗೊಂಡರೆ, ಹೆಸರು ಬಯಲಾಗಲಿಲ್ಲವೆಂದು ಅಂದು ಅಪ್ಪ ನಿಟ್ಟುಸಿರು ಬಿಟ್ಟರು. ಆದರೆ, ಅಪ್ಪನ ಆಫೀಸಿನಲ್ಲಿ, ತನ್ನ ಆಫೀಸಿನಲ್ಲಿ, ತಾವಿದ್ದ ಅಪಾರ್ಟ್‌ಮೆಂಟ್‌ನಲ್ಲಿ, ಬಂಧು ಬಳಗದಲ್ಲಿ ವಿಷಯ ಮಳೆಗಾಲದ ಫ್ಲೂನಂತೆ ಸರಸರ ಹಬ್ಬಿ ಬಿಟ್ಟಿತ್ತು. ತಾನಿನ್ನು ಆ ಕೆಲಸಕ್ಕೆ ಸೇರಿ ಎರಡು ತಿಂಗಳೂ ಕಳೆದಿರಲಿಲ್ಲ. ಮನೆಯಲ್ಲಿ ಅವರ ಫೋನ್‌ಗಳು ಮೊಳಗುತ್ತಲೇ ಇವೆ. ಎಲ್ಲರಲ್ಲಿಯೂ ನೋವು. ಸಹಾನುಭೂತಿ, ಭಯ. ನಾವು ತಪ್ಪಾಗಿ ತಿಳಿಯಬಹುದೆಂದು ನಮಗೆ ನೇರವಾಗಿ ಫೋನ್ ಮಾಡದವರೂ ಇದ್ದಾರೆ.

ಅಂದು ಆಸ್ಪತ್ರೆಗೆ ರಾಜಕೀಯ ಮುಖಂಡರು, ನಾಯಕರು, ಪ್ರಮುಖರು, ಅನೇಕ ಎನ್.ಜಿ.ಒಗಳು, ಮಹಿಳಾ ಸಂಘಗಳು ಬಂದವು. ತಾವು ಬಂದು ಅತ್ಯಾಚಾರಕ್ಕೆ ಒಳಗಾದವಳನ್ನು ಕಂಡು ಸಹಾನುಭೂತಿ ತೋರಿಸಿದೆವೆಂಬ ವಿಷಯವು ಸುದ್ದಿಯಾಗಿ ಮಾಧ್ಯಮದಲ್ಲಿ ಬರಬೇಕೆಂದು ಪಕ್ಕದಲ್ಲಿದ್ದ ವರದಿಗಾರರಿಗೆ ಅವರಲ್ಲಿ ಕೆಲವರು ನೇರವಾಗಿ ಹೇಳಿದ್ದು ನಮ್ಮ ಮನೆಯವರ ಕಿವಿಗೆ